ಪ್ರಶಿಕ್ಷಣ ಮಾಸಪತ್ರಿಕೆ

# ಪೂರ್ಣಶಿಕ್ಷಾ

ಆಗಸ್ಟ್ ಮತ್ತು ಸೆಪ್ಟೆಂಬರ್ ೨೦೨೪



## ಸಂಪಾದಕೀಯ

ಅಧ್ಯಾಪಕ ತನ್ನ ವಿಷಯವನ್ನು ಮಾತ್ರ ತರಗತಿಯ ಒಳಗೆ ತೆಗೆದುಕೊಂಡು ಹೋಗುವುದಿಲ್ಲ, ಅವನ ವ್ಯಕ್ತಿತ್ವ, ಅನುಭವಗಳನ್ನೂ ತೆಗೆದುಕೊಂಡು ಹೋಗುವನು. ಇಂದಿನ ಯಾಂತ್ರಿಕ ಅಥವಾ ಆಧುನಿಕ ವ್ಯಾಖ್ಯಾನವು ಶಿಕ್ಷಣವನ್ನು ಪರೀಕ್ಷೆಗೆ, ಅಧ್ಯಾಪಕನನ್ನು ನೌಕರಿಗೆ ಸೀಮಿತ ಮಾಡಿದೆ. ಪೂರ್ಣಪ್ರಮತಿಯಲ್ಲಿ ಆ ಸಂದರ್ಭ ಬಂದಿಲ್ಲ. ಈ ತಿಂಗಳ ವಿಶೇಷವೆಂದರೆ ಪೂರ್ಣಪ್ರಮತಿಯ ಅಧ್ಯಾಪಕ ತಂಡವು ರಾಮಕೃಷ್ಣ ಆಶ್ರಮದ ಮೌಲ್ಯಾಧಾರಿತ ಶಿಕ್ಷಣ ಕಾರ್ಯಾಗಾರದಲ್ಲಿ ಪಾಲ್ಗೊಂಡಿತ್ತು. ಚಾರಿತ್ರ್ಯ ನಿರ್ಮಾಣ ಎಲ್ಲಕ್ಕಿಂತಲೂ ಪ್ರಮುಖ ಎನ್ನುವುದು ಒಟ್ಟು ತಾತ್ಪರ್ಯವಾಗಿತ್ತು. ಈ ಸಂಚಿಕೆಯಲ್ಲಿ ಪ್ರತ್ಯೇಕ ಅಧ್ಯಾಪಕರ ಅನುಭವಗಳನ್ನು ದಾಖಲಿಸಲಾಗಿದೆ. ಕಲಿಕೆಗೆ ವೇದಿಕೆಯಾಗಿ ಪ್ರಶಿಕ್ಷಣದಲ್ಲಿ ನಡೆದ ಇನ್ನೂ ಅನೇಕ ಸ್ವಾರಸ್ಯಕರ ಚಟುವಟಿಕೆಗಳ ಸಂಗ್ರಹ ಈ ಪತ್ರಿಕೆಯಾಗಿದೆ. ಓದಿ, ಆನಂದಿಸಿ, ಅಭಿಪ್ರಾಯವನ್ನು ಹಂಚಿಕೊಳ್ಳಿ. ಮತ್ತೆ ಭೇಟಿಯಾಗೋಣ.

**- ಪ್ರಶಿಕ್ಷಣ ತಂಡ**

## ಒಳಗೆ ಏನೇನಿದೆ


- ಹಿನ್ನೋಟ - ಮುನ್ನೋಟ
- ಸ್ಮರಣೀಯ ಕ್ಷಣಗಳು - ಛಾಯಾಚಿತ್ರ ಸಂಗ್ರಹ
- ಮಂಜೂಷಾ - ಅಧ್ಯಯನದ ಕಲಿಕೆಗಳು
- ಮೆದುಳಿಗೆ ಮೇವು
- ಘೋಷಣೆಗಳು

## ಹಿನ್ನೋಟ - ಮುನ್ನೋಟ

### ಹಿನ್ನೋಟ (ಆಗಸ್ಟ್ - ಸೆಪ್ಟೆಂಬರ್)


- ಪುನರುತ್ಥಾನ ವಿದ್ಯಾಪೀಠದ ಪ್ರಕಲ್ಪ ರಾಮ್ ವಿದ್ಯಾಪೀಠದ ಕಲ್ಪನೆ-ಚಿಂತನೆಯ ಬಗ್ಗೆ ಇಂದುಮತಿಯವರೊಡನೆ ಸಂವಾದ ಸಭೆಯಲ್ಲಿ ಪೂರ್ಣಪ್ರಮತಿಯ ೪ ಸದಸ್ಯರು ನಿಯಮಿತವಾಗಿ ಭಾಗವಹಿಸುತ್ತಿದ್ದಾರೆ.
- ತರುಣ ಚೌಬೀಸಾ (S2S ತಂಡದ ಸದಸ್ಯರು, NCERT ಪಠ್ಯಪುಸ್ತಕ ರಚನಾ ಸಮಿತಿಯ ಸಂಯೋಜಕರು) ಇದೀಗ ನೂತನ ಶಿಕ್ಷಣ ನೀತಿಯ ಅನ್ವಯ ಪ್ರಕಟವಾಗಿರುವ ಗಣಿತಮತ್ತು ವಿಜ್ಞಾನ ಪಠ್ಯಪುಸ್ತಕದ ಚಿಂತನೆ ಮತ್ತು ರಚನೆಯ ಬಗ್ಗೆ ಪೂರ್ಣಪ್ರಮತಿಯ ಅಧ್ಯಾಪಕರಿಗೆ ಮಾರ್ಗದರ್ಶನ ಕಾರ್ಯಾಗಾರ ಮಾಡಿದರು.
- ಪೂರ್ಣಪ್ರಜ್ಞ ಬಡಾವಣೆಯಲ್ಲಿ ಮೊದಲಬಾರಿಗೆ ನೂತನ ಪ್ರಶಿಕ್ಷಣ ವರ್ಗ ಪ್ರಾರಂಭವಾಯಿತು.
- ಪೂರ್ಣಪ್ರಮತಿಯ ೫ ಅಧ್ಯಾಪಕರ ತಂಡ ಉದ್ಭವ ಶಾಲೆಗೆ ಭೇಟಿ ನೀಡಿ ಅಲ್ಲಿನ ಉತ್ತಮ ಅಂಶಗಳನ್ನು ಗ್ರಹಿಸಿತು ಮತ್ತು ಅಧ್ಯಾಪಕರೊಡನೆ ಸಂವಾದ ಮಾಡಿ ತಮ್ಮ ಅನೇಕ ಸವಾಲುಗಳನ್ನು ಅಲ್ಲಿ ಹೇಗೆ ನಿರ್ವಹಿಸುತ್ತಿದ್ದಾರೆ ಎಂಬ ಮಾಹಿತಿ ಪಡೆದರು.
- ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದರ ಆಶಯದಂತೆ ಪೂರ್ಣಪ್ರಮತಿಯ ಅಧ್ಯಾಪಕರೆಲ್ಲರೂ ಮೌಲ್ಯಾಧಾರಿತ ಶಿಕ್ಷಣದ ಕಾರ್ಯಾಗಾರದಲ್ಲಿ ಭಾಗವಹಿಸಿದರು.
- ಪೂರ್ಣಪ್ರಮತಿಯ ೩ ಕಲಾವಿದರ ತಂಡ ಹಸ್ತಲೇಖನ, ಕಾಗದ ತಯಾರಿ, ಮಸಿ ತಯಾರಿಯನ್ನು ಕಲಿಯಲು ಅಹಮದಾಬದ್ ನ ಹೇಮಚಂದ್ರ ಗುರುಕುಲಕ್ಕೆ ಐದು ದಿನಗಳ ಕಾರ್ಯಾಗಾರಕ್ಕೆ ಹೋಗಿದ್ದರು.
- ಆಧುನಿಕತೆಯ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ಶ್ರೀ ಪವನ್ ಗುಪ್ತಾ ಅವರ ಮಾರ್ಗದರ್ಶನದಲ್ಲಿ ಓಂಶಾತಿ ಧಾಮದಲ್ಲಿ ನಡೆದ ೪ ದಿನಗಳ ಕಾರ್ಯಾಗಾರದಲ್ಲಿ ಪೂರ್ಣಪ್ರಮತಿಯ ೨ ಸದಸ್ಯರು ಭಾಗವಹಿಸಿದ್ದರು.
- ಜವಹರ್ ಲಾಲ್ ನೆಹರು ತಾರಾಲಯದಲ್ಲಿ ನಡೆದ ಒಂದು ವಾರದ ವಿಜ್ಞಾನ ಸಂಕಿರಣದಲ್ಲಿ ಪೂರ್ಣಪ್ರಮತಿಯ ೭ ಜನ ಅಧ್ಯಾಪಕರು ಭಾಗವಹಿಸಿದರು.
- ಮೇಲುಕೋಟೆಯಲ್ಲಿ ಲಕ್ಷ್ಮೀತಾತಾಚಾರ್ಯರಿಂದ ಸ್ಥಾಪಿತವಾದ ಸಂಸ್ಕೃತಿ ಫೌಂಡೇಶನ್ ಅವರು ಗೋ-ವೈಭವ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪೂರ್ಣಪ್ರಮತಿಯ ೮ ಪೋಷಕರು ಮತ್ತು ಅಧ್ಯಾಪಕರ ತಂಡ ಭಾಗವಹಿಸಿತ್ತು.
- ವಾಮನ ಜಯಂತಿಯ ಸಂದರ್ಭದಲ್ಲಿ ಅಧ್ಯಾಪಕರು ತಾವು ಕಲಿತ ವಿಷಯಗಳ ಪ್ರದರ್ಶನವನ್ನು ಮಕ್ಕಳಿಗಾಗಿ ಆಯೋಜನೆ ಮಾಡಿದ್ದರು. ಇದರಿಂದ ಮಕ್ಕಳಿಗೆ ಹೇಗೆ ಸಿದ್ಧವಾಗಬೇಕು ಎಂಬ ಅನೇಕ ಆಯಾಮಗಳು ತಿಳಿಯಿತು.
- ಶೈಕ್ಷಣಿಕ ವರ್ಷದ ಮೊದಲ ಅವಧಿಯ ಆತ್ಮಾವಲೋಕನ, ಮುಂದಿನ ಹೆಜ್ಜೆಗಳು ಮತ್ತು ಪೋಷಕರೊಡನೆ ಸಂವಾದ, ಪ್ರಗತಿ ಹಂಚಿಕೆ ನಡೆಯಿತು.

### ಮುನ್ನೋಟ (ಅಕ್ಟೋಬರ್)

- ದಸರಾ ಹಬ್ಬದ ಆಚರಣೆ ಮತ್ತು ವಿರಾಮ
- ಶೈಕ್ಷಣಿಕ ವರ್ಷದ  ಎರಡನೆಯ ಅವಧಿಯ ಸಿದ್ಧತೆ
- ಕಲಿಕೆಯ ಸೂತ್ರಗಳು ಮತ್ತು ಬೋಧನೆಯ ಸೂತ್ರಗಳ ಕುರಿತಾಗಿ ಅಧ್ಯಾಪಕಕ್ರಿಗೆ ಪ್ರಶಿಕ್ಷಣ ವರ್ಗ ನಡೆಯಲಿದೆ.

## ಸ್ಮರಣೀಯ ಕ್ಷಣಗಳು





ಗುಂಪು ಚರ್ಚೆ - ರಾಮಕೃಷ್ಣ ಆಶ್ರಮ

ಶ್ರೀ ದಿನೇಶ್ ಕಾಮತ್ ಅವರ ಭೇಟಿ





ವಿಭಕ್ತಿ-ಪ್ರತ್ಯಯ ಕಾರ್ಯಾಗಾರ - ಅಕ್ಷರಂ (ಪ್ರಶಿಕ್ಷಣಾರ್ಥಿಗಳು)







ಕೆಲವೇ ದಿನಗಳಲ್ಲಿ ಸಿದ್ಧವಾದ ಸಂಸ್ಕೃತ ನಾಟಕ (ಛತ್ರಪತಿ ಶಿವಾಜಿ) ಪುಸ್ತಕ ಬಿಡುಗಡೆ ಕಾರ್ಯಕ್ರಮ - ಅಕ್ಷರಂ



ಪೂರ್ಣಪ್ರಮತಿ ಚಿತ್ರಕಲಾವಿದರು
ಹಸ್ತಲೇಖನ ಕಾರ್ಯಾಗಾರ (ಅಹಮದಾಬಾದ್)



ಭಾರತೀಯ ಕ್ರಮದಲ್ಲಿ ಸೂಕ್ಷ್ಮವಾಗಿ ದಾರ ತೆಗೆಯುವ ಕ್ರಮ
ವಿದ್ಯಾಕ್ಷೇತ್ರ - ಕಾರ್ಯಾಗಾರ



ಪ್ರಶಿಕ್ಷಣ ತಂಡದ ಸದಸ್ಯರಿಗೆ ಸ್ವ-ಕಲಿಕಾ ವಿಧಾನದ ಕಾರ್ಯಾಗಾರ (ಅಸಲಿ ಶಿಕ್ಷಾ)

## ವರ್ತಮಾನ ಕಾಲದಲ್ಲಿ ಆಧುನಿಕ ಶಿಕ್ಷಣ

**- ಭಾಗ್ಯಶ್ರೀ ಚಿಕ್ಕೇರೂರು (ಪ್ರಶಿಕ್ಷಕರು)**

ಸ್ವಚ್ಛ ಶಾಂತವಾದ ವಾತಾವರಣದಲ್ಲಿ ಮೌಲ್ಯ ಶಿಕ್ಷಣ ಕಾರ್ಯಗಾರ ಬೆಳಿಗ್ಗೆ ೯.೩೦ ಕ್ಕೆ ವಿದ್ವಾನ್ ಗುರುರಾಜರ ಭಜನೆ ಯೊಂದಿಗೆ ಪ್ರಾರಂಭವಾಯಿತು.

ಪೂಜ್ಯ ನಿತ್ಯಸ್ಥಾನಂದ ಸ್ವಾಮೀಜಿಯವರು ವರ್ತಮಾನ ಕಾಲದಲ್ಲಿ ಗುರುಕುಲ ಪದ್ಧತಿಯನ್ನು ಹೇಗೆ ಅಳವಡಿಸಿಕೊಳ್ಳುವುದು ಎಂಬುದನ್ನು ಅನೇಕ ಉದಾಹರಣೆಗಳೊಂದಿಗೆ ವಿವರಿಸಿದರು. ಅದರಲ್ಲಿ ಪ್ರಮುಖವಾಗಿ ನಾಲ್ಕು ಅಂಶಗಳು, ಚಾರಿತ್ರ್ಯ, ಮನಃಶಕ್ತಿ ವಿಶಾಲ ಮನೋಭಾವ, ಸ್ವಯಂ ಕೆಲಸ ಈ ನಾಲ್ಕು ಅಂಶಗಳನ್ನು ನಮ್ಮ ಗುರುಕುಲಗಳಲ್ಲಿ ಅಳವಡಿಸಿಕೊಂಡರೆ ಬದಲಾವಣೆ ಸಾಧ್ಯ ಎಂದು ತಿಳಿಸಿಕೊಟ್ಟರು.

ವಿವೇಕಾನಂದ ಜೀವನಶೈಲಿ ತಿಳಿಸಿದರು. ನಮ್ಮ ಹವ್ಯಾಸವನ್ನು ನಾವು ದಿನನಿತ್ಯದಲ್ಲಿ ಹೇಗೆ ಅಭ್ಯಾಸ ಮಾಡಿದರೆ ಹಾಗೆ ಅದು ರೂಪಗೊಳ್ಳುತ್ತಾ ಹೋಗುತ್ತದೆ ಹಾಗೆ ಮಕ್ಕಳಲ್ಲಿಯೂ ಸಹ ಒಳ್ಳೆಯ ಗುಣಗಳನ್ನು ಅನುಸರಿಸಿದರೆ ಅದು ಅವರ ಹವ್ಯಾಸವಾಗುತ್ತದೆ ಎಂದು ವಿವರಿಸಿದರು. **"ನೈತಿಕತೆ ಪರಿಪೂರ್ಣ ಇಲ್ಲದೆ ಯಾವ ಕಾರ್ಯ ಮಾಡಿದ್ದು ಅಪೂರ್ಣ"** ಎಂದು ತಿಳಿಸಿದರು. ಸಾಮಾನ್ಯ ಶಿಕ್ಷಕ ಬೋಧಿಸುತ್ತಾನೆ, ಉತ್ತಮ ಶಿಕ್ಷಕ ಜ್ಞಾನವನ್ನು ನೀಡುತ್ತಾನೆ ಮತ್ತು ಸ್ಪೂರ್ತಿಯನ್ನು ನೀಡುತ್ತಾನೆ ಎಂಬ ಅಂಶ ಆನಂದ ನೀಡಿತು.

ವೀರೇಶಾನಂದ ಸ್ವಾಮೀಜಿ ಅವರು 'ಗುರು 'ಅಂದರೆ ಯಾವ ರೀತಿ ಇರಬೇಕು, ಅವರ ಭೋದನಾ ಕ್ರಮ ಯಾವ ರೀತಿ ಇರಬೇಕು ಎಂದು ಭೋದಿಸಿದರು. ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಂಡರೆ ಜ್ಞಾನ ಶ್ರದ್ಧೆಯಿಂದ ಎಲ್ಲವೂ ಸಾಧ್ಯ. ಬೋಧನಾ ಕ್ರಮ ಎಂದರೆ ಉಪದೇಶ, ಉಪ ಪಕ್ತಿ, ಉಪಾಸನ ಇವುಗಳ ಬಗ್ಗೆ ವಿವರಿಸಿದರು.

ಆಧುನಿಕಶಾಲೆಗಳಲ್ಲಿ ಗುರುಕುಲದಲ್ಲಿರುವಂತೆ ಆಧ್ಯಾತ್ಮಿಕ ವಾತಾವರಣ ಸೃಷ್ಟಿ ಮಾಡಿಕೊಳ್ಳಬೇಕು ಇದರಿಂದ ಸಂಸ್ಕಾರ ಸಂಸ್ಕೃತಿ ಒಳ್ಳೆಯ ನಡತೆ ಸನ್ಮಾರ್ಗದಿಂದ ನಡೆಯಲು ಸಹಾಯವಾಗುತ್ತದೆ. ಎಲ್ಲಾ ಮೌಲ್ಯಗಳು ಆಧ್ಯಾತ್ಮಿಯ ಮೂಲ ಮತ್ತು ಈ ಆಧ್ಯಾತ್ಮವೇ ನಮ್ಮ ವ್ಯಕ್ತಿತ್ವದ ಸಾರ ಎಂದು ತಿಳಿಸಿದರು. ಗುಂಪು ಚರ್ಚೆಗಳಿಂದ ಮತ್ತಷ್ಟು ಮಾಹಿತಿ ಹಾಗೂ ವಿಷಯಗಳ ವಿನಿಮಯ ತುಂಬಾ ಚೆನ್ನಾಗಿ ಮೂಡಿ ಬಂದಿತ್ತು. ಈ ಕಾರ್ಯದಲ್ಲಿ ಮಕ್ಕಳ ಹಾಗೂ ಶಿಕ್ಷಕರ ಏಕಾಗ್ರತೆಯನ್ನು ಹೆಚ್ಚಿಸಲು ಚಟುವಟಿಕೆಗಳು ಇದ್ದಿದ್ದರೆ ಅನುಕೂಲಕರವಾಗಿತ್ತು.

**ಕಾರ್ಯಾಗಾರದಲ್ಲಿ ನನ್ನ ಕಲಿಕೆ :**

- ನಮ್ಮ ಗುರಿ ಸ್ಪಷ್ಟವಾಗಿರಬೇಕು.
- ಗುರುಗಳು ಪ್ರೇರಣಾದಾಯಕವಾಗಿರಬೇಕು ಹಾಗೂ ವಿಶಾಲ ಮನೋಭಾವ ಬೆಳೆಸಿಕೊಳ್ಳಬೇಕು.
- ಮಗುವಿನ ಮನೋಧರ್ಮವನನ್ನು ಅರಿತು ಬೋಧನೆ ಮಾಡು ಮಾಡುವುದು.
- ಕಲಿಕೆಯ ಭಾಷೆ ಹಲವಾರು.ಕಲಿಕೆ ನೈಜತೆಗೆ ಹತ್ತಿರವಾಗಿರಬೇಕು.
- ಶಿಕ್ಷಣದಿಂದ ಆತ್ಮಸ್ಥೈರ್ಯ ಸೇವಾ ಮನೋಭಾವ, ಸ್ವಾವಲಂಬಿ ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ಮಾಡಬೇಕು.
- ಶಿಕ್ಷಣವೆಂದರೆ ಕೇವಲ ವಿಷಯ ಸಂಗ್ರಹವಲ್ಲ.

## ಆಹಾರವನ್ನು ಎಸೆಯುವ ಮುನ್ನ ಯೋಚಿಸಿ

**- ಪೂರ್ಣಿಮಾ ಭರದ್ವಾಜ್ (ಮಾಧ್ಯಮಿಕ ಅಧ್ಯಾಪಕರು)**

ನಾವೆಲ್ಲರೂ ನಮ್ಮ ಅಡುಗೆ ಮನೆಯಲ್ಲಿ ಅನೇಕ ತರಕಾರಿಗಳನ್ನು ಉಪಯೋಗಿಸುತ್ತೇವೆ. ಅವುಗಳಲ್ಲಿ ಕೇವಲ ತಿರುಳನ್ನು ಉಪಯೋಗಿಸಿ ಸಿಪ್ಪೆಯನ್ನು, ಬೀಜಗಳನ್ನು ನಿಷ್ಪ್ರಯೋಜಕವೆಂದು ಎಸೆದು ಬಿಡುತ್ತೇವೆ. ಅವುಗಳಲ್ಲಿ ಒಂದು ಉಪಯುಕ್ತ ವಾದುದು ಬೂದು ಕುಂಬಳ ಕಾಯಿ ಬೀಜ.

**ಹೇಗೆ ಉಪಯೋಗಿಸಬೇಕು:**

ಬೂದು ಕುಂಬಳ ಬೀಜಗಳನ್ನು ಚೆನ್ನಾಗಿ ತೊಳೆದುಕೊಂಡು ಒಂದು ದಿನ ಆರಲು ಬಿಡಿ, ಮಾರನೇ ದಿನ ಅದರ ಸಿಪ್ಪೆ ತೆಗೆದು ಒಳಗಿನ ತಿರುಳನ್ನು ಉಪಯೋಗಿಸಬೇಕು.

**ಪ್ರಮಾಣ**: ೧-೨ ಚಮಚ ಪ್ರತಿದಿನ

ಈ ಬೀಜಗಳನ್ನು ಪ್ರತಿದಿನ ಬೆಳಿಗ್ಗೆ ಖಾಲೀ ಹೊಟ್ಟೆಯಲ್ಲಿ, ಅಥವಾ ಅಡುಗೆಯ ಜೊತೆಗೆ ಬಳಸಬಹುದು ಅಂದರೆ ಸಾಂಬಾರ್, ದಾಲ್ ಗಳಲ್ಲಿ ಬಳಸಬಹುದು.

**ಮಹತ್ವ:**

- ನಮ್ಮ ಕೂದಲ ಆರೋಗ್ಯ, ಕಣ್ಣಿನ ಆರೋಗ್ಯ ಹೆಚ್ಚಿಸಲು ಸಹಾಯಕಾರಿ
- ಇದು ತನ್ನಲ್ಲಿ ಅನೇಕ ಸೂಕ್ಷ್ಮ ಪೋಷಕಾಂಶಗಳನ್ನು ಹೊದುಗಿಸಿಕೊಂಡಿದ್ದು ಅವುಗಳಲ್ಲಿ ಮುಖ್ಯವಾದ ಪೋಷಕಾಂಶಗಳೆಂದರೆ ಸತು,ಮ್ಯಾಂಗನೀಷಿಯಂ, ತಾಮ್ರ, ಸಾರಜನಕ ಮತ್ತು ಸಸಾರ ಜನಕ ಇತ್ಯಾದಿ.
- ಹೃದಯ ಸಂಬಂಧಿ ಕಾಯಿಲೆಗಳ ತಡೆಯಲು
- ಜಠರದ ಹುಣ್ಣು ಕಡಿಮೆ ಮಾಡಲು
- ವೀರ್ಯಾಣುಗಳ ಕ್ಷಮತೆ ಹೆಚ್ಚಿಸಲು
- ದೇಹದಿಂದ ವಿಷ ವಸ್ತುಗಳನ್ನು ಹೊರಹಾಕಲು
- ದೇಹದಲ್ಲಿನ ಊತ ಬಾವುಗಳನ್ನು ಕಡಿಮೆ ಮಾಡಲು ಇದರಲ್ಲಿನ ಸೂಕ್ಷ್ಮ ಪೋಷಕಾಂಶಗಳು ಸಹಾಯ ಮಾಡುತ್ತದೆ
- ಇದು ತನ್ನಲ್ಲಿ ಒಳ್ಳೆಯ ನಾರಿನಂಶ, ಪ್ರೋಟೀನ್ ಹೊಂದಿದ್ದು ಇದು ದೇಹದಲ್ಲಿನ ಸಕ್ಕರೆ ಅಂಶ ನಿಯಂತ್ರಣದಲ್ಲಿಡಲು ಸಹಕರಿಸುತ್ತದೆ.
- ಇದು ದೇಹದಲ್ಲಿನ ಕೆಟ್ಟ ಕೊಬ್ಬಿನ ಅಂಶವನ್ನು ಕಡಿಮೆ ಮಾಡಿ ಒಳ್ಳೆಯ ಕೊಬ್ಬಿನ ಅಂಶವನ್ನು ಹೆಚ್ಚಿಸುತ್ತದೆ

## ಪ್ರಯೋಗ ಮಾಡಿ ಫಲಿತಾಂಶ ತಿಳಿಸಿ :)

## Enlightening Experience at Ramakrishna Ashrama

**- Sumangala V (Preparatory Teacher, Anandavana)**

I am grateful for the opportunity to attend the event with Shri Nityastananda Swamiji and Shri Veereshananda Swamiji on 31/08/2024 at Ramakrishna Ashram. The workshop was truly enlightening.

I particularly cherished the bhajan led by Vidwan Gururaj, where active participation brought a deeper sense of bliss than mere listening.

Swami Nityastananda Ji emphasized the paramount importance of character building, advocating for moral integration in education. He poignantly stated, “Safeguard the character. Do not safeguard the wealth,” reminding us that while morality can exist without spirituality, spirituality cannot thrive without morality. His assertion that “knowledge without character is dangerous to mankind” deepened my sense of responsibility towards society.

Swami Veereshananda Swamiji’s session reminded me of our limited understanding of great gurus like Yagnavalkya, Vasishta, Sanathkumar and others. He highlighted the virtues a guru should embody: being a good listener, upholding moral values, and practicing purity and discipline.

Both swamijis discussed effective ways to engage with children in the classroom, emphasizing the phrase the importance of recognizing a child's psychological needs. Our group discussions focused on identifying challenges and developing child-centric solutions, advocating for teachers to embody nurturing qualities and adopt a differentiated, activity-based approach that honors tradition.

Overall, the session reinforced our commitment at Purnapramati to these core values. Thank you for facilitating this enlightening experience.

# My experience with students

**- Raghavendra (Parent & Fecilitator)**

Bhārata is a wonderland in many senses with different languages, different culinary delights, different architectures, different landscapes, different weather patterns and many more. The question which comes to my mind always is, do I know it all or can I know it all. Irrespective of the answer, what to know more may be irrelevant and why to know at all is difficult to answer. How to learn and why to learn about Bhārata are the pertinent questions to be answered. The medium and the expression to make one know more about Bhārata through its Itihāsa makes the learning enjoyable.

Over the past few decades, learning of Bhāratīya Itihāsa has not had the desired impact of the very reason to study and understand Itihāsa and its significance. The curriculum is focused on dates / year / chronology, studying and learning Itihāsa in silos ignoring the context, glorification of invaders, politically influenced narrative, wilful wrong interpretation & content delivery and content incompleteness / wholesomeness.

The key objectives of learning Itihāsa are – to get inspired, build raashtra prema, help vyaktitva vikasana, instill pride/asmita, understand the lessons & be prepared with plans/actions from the lessons learnt and having foresight derived from study and research leading to connecting the dots across areas of study.

To achieve the key objectives of learning Itihāsa, one most important aspect is how to make the learning of Itihāsa interesting. The best way to impart the objectives of learning is to connect the analytical mind with the necessary emotion. As Rudyard Kipling quipped "If history were taught in the form of stories, it would never be forgotten", Stories are the best medium to connect the analytical mind with the necessary emotions.

Good stories are interesting, touch the heart, engrossing and can make one live through the events. Good stories to learn Itihāsa are the ones which are describing and narrating the desha-kaala-vyakti-sandarbha chitrana and will ensure that the learning map is created for the student which will help him/her attain the key objectives of learning the Itihāsa.

Being mindful of Robert A Heinlein's quote " A generation which ignores history has no past-and no future", I wanted to contribute to the awakening of sorts by making Bhāratīya Itihāsa interesting.

When I expressed my desire to tell stories about Bhārata to Paartha environment students, the interest shown and the encouragement given by adhyapaka / adhyapakis of the environment was awesome. And when I started teaching, the questions and observations by the kids made me get on to different viewpoints. The imparting of my learning to kids has made me hungry to read and learn more, enhanced the ability to tell impactful stories and design ways to create and maintain interest in kids. Interdisciplinary areas touched upon such as archaeology, paleogeology, chemistry, architecture, literature. botany etc have all created curiosity and provided a framework to learn anything end to end.

My heartfelt dhanyavadas to all at Purnapramati who have shown confidence in me and allowed me to express myself.

## ತರಗತಿಯಲ್ಲಿ ವಿದ್ಯಾರ್ಥಿ ಕೇಂದ್ರಿತ ಮನೋಧರ್ಮ

**- ಸಮನಾ ಭಟ್ (ಸಂಸ್ಕೃತ ಅಧ್ಯಾಪಕರು, ಪ್ರೌಢಶಾಲೆ)**

ಪ್ರಶಾಂತವಾದ ಪರಿಸರದಲ್ಲಿ ಭಜನೆಯೊಂದಿಗೆ ಆರಂಭಗೊಂಡ ಸಭೆಯಲ್ಲಿ ಮೊದಲಿಗೆ ಶ್ರೀ ನಿತ್ಯಸ್ಥಾನಂದ ಜೀ ಅವರು ಪ್ರಾರಂಭಿಕ ನುಡಿಗಳನ್ನಾಡಿದರು . ಮುಂದೆ , ಸ್ವಾಮಿ ವೀರೇಶಾನಂದ ಜೀ, ನೀತ್ಯಸ್ಥಾನಂದ ಜಿ ಮೊದಲಾದವರು ಮಾತನಾಡಿದರು.

**ಉಪನ್ಯಾಸ ಸಾರ :**

***ಶಿಕ್ಷಣ ಇಂದು ತಲೆಯಮೇಲಿನ ಹೊರೆಯಂತಾಗಿದೆ. ಶಿಕ್ಷೆಯಾಗಿದೆ.***

ಗುರುಕುಲ ಪದ್ಧತಿಯ ಅಳವಡಿಕೆಯು ಈಗಿನ ಸಮಾಜದ ಅಭಿವೃದ್ಧಿಗೆ ಬಹಳ ಸಹಕಾರಿಯಾಗುವುದು. ರಾಮಕೃಷ್ಣರ ಕಥೆಗಳು ಜೀವನದ ಮೌಲ್ಯವರ್ಧಕಗಳು .ಇಂಥವುಗಳ ಬೋಧನೆಯಿಂದ ಮಕ್ಕಳಲ್ಲಿ ಮೌಲ್ಯಗಳನ್ನು ತುಂಬುತ್ತಾ ದೇಶದ ಆಸ್ತಿಯನ್ನಾಗಿಸಬಹುದು. ಇಲ್ಲವಾದಲ್ಲಿ ಕೇವಲ ಪ್ರಮಾಣಪತ್ರಗಳ ಸಂಗ್ರಹಣೆ ಅಷ್ಟೇ ಲಾಭವಾದೀತು. ಭಾವನಾತ್ಮಕವಾಗಿ ಭಾರತೀಯತೆ ಬೇರೂರದೆ ಎಷ್ಟೇ ಪದವಿಗಳನ್ನು ಪಡೆದರೂ ವ್ಯಕ್ತಿಯ ಉನ್ನತಿ ಸಾಧ್ಯವಿಲ್ಲ. ಯಾವುದನ್ನು ಪ್ರೀತಿಯಿಂದ ಕಲಿಯುವೆವೋ ಅದು ಅಚ್ಚಳಿಯದೆ ಉಳಿವುದು . ಉಪದೇಶಿಸಿದ್ದನ್ನು ಉಪಾಸನೆಯಂತೆ ಬಿಡದೆ ಆರಾಧನೆ ಮಾಡುವೆವೋ ಅದು ಮಾತ್ರ ಮಕ್ಕಳ ಭವಿಷ್ಯಕ್ಕೆ ಉಪಾಯನ (ಗಿಫ್ಟ್) ದಂತೆ ಜೊತೆಯಾಗುವುದು.

ಇದರ ನಂತರ, ಶ್ರೀಯುತ ಮುರಳೀಧರ ಅವರು " ತರಗತಿಯಲ್ಲಿ ವಿದ್ಯಾರ್ಥಿ ಕೇಂದ್ರಿತ ಮನೋಧರ್ಮ " ಎಂಬ ವಿಷಯವನ್ನು ನಮ್ಮತ್ತ ಕೊಟ್ಟು ಪರಸ್ಪರ  ಚರ್ಚೆ ನಡೆಸಿ ಐದಾರು ಸಾರಭೂತವಾದ ಅಂಶಗಳ ಜೊತೆ ಮರಳಲು ತಿಳಿಸಿದರು. ಅಂತೆಯೇ ನಾವು ಆ ಬಗ್ಗೆ ಅಭಿಪ್ರಾಯಗಳನ್ನು ಹಂಚಿಕೊಂಡು, ಮಗುವಿನ ಮನೋಧರ್ಮಕ್ಕೆ ತಕ್ಕ ತರಗತಿಯ ಯೋಜನೆಯೇ ಮಗುವಿನ ಶೈಕ್ಷಣಿಕ ಪ್ರಗತಿಯ ಜೊತೆ ಮಾನಸಿಕ ಉನ್ನತಿ ಹಾಗೂ ಭಾವನಾತ್ಮಕ ಸಂಬಂಧ ವನ್ನು ಬೆಸೆಯಲು ಸಹಕಾರಿ ಎಂಬ ದೃಷ್ಟಿಯಿಂದ ಒಂದಷ್ಟು ಅಂಶಗಳನ್ನು ಸಿದ್ಧಪಡಿಸಿಕೊಂಡು ಸಭೆಯ ಮುಂದಿಟ್ಟರು .ಹಲವು ವಿಷಯಗಳಲ್ಲಿ ಸಾಮ್ಯ ಇದ್ದರೂ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ವಿನೂತನ, ಆವಶ್ಯಕ ಹೊಸ ಹೊಸ ಉಪಾಯಗಳೂ ಕಂಡುಬಂದವು. ಒಟ್ಟಾರೆ, ತರಗತಿಗೆ ಹೋಗುವಾಗ ಪ್ರತಿ ಶಿಕ್ಷಕನೂ ಉತ್ಸಾಹಿಯಾಗಿ, ಕಲಿಕೆಯ ವಿವಿಧ ಸಾಧನಗಳನ್ನು ಹಿಡಿದು ಪ್ರವೇಶಿಸಿದರೆ, ಮಕ್ಕಳ ಮನಹೊಕ್ಕು ಕಲಿಸಲು ಸಾಧ್ಯ ಎಂಬುದನ್ನು ಮನಗಂಡೆವು. ಇಂತಹ ಉಪಯುಕ್ತ ಸಂದರ್ಭಗಳನ್ನು ಕಲ್ಪಿಸಿಕೊಟ್ಟಿದ್ದಕ್ಕೆ ಪೂರ್ಣಪ್ರಮತಿ ಪರಿವಾರಕ್ಕೆ ಧನ್ಯವಾದಗಳು.

## ಮೌಲ್ಯ ಶಿಕ್ಷಣ ಕಾರ್ಯಾಗಾರ

**- ಲತಾ (ಪ್ರಶಿಕ್ಷಣ ಪ್ರತಿನಿಧಿ)**

ಕರ್ನಾಟಕ ಸಂಗೀತ ಪರಂಪರೆಯ **ಚಿಂತನಪಲ್ಲಿ ಪರಂಪರೆ** ಎಂಬಲ್ಲಿಂದ ಸಿದ್ದರಾಗಿರುವ ಕೆ ಗುರುರಾಜ್ ಅವರು ಹಾರ್ಮೋನಿಯಂ ಸಹಿತ ಭಜನೆ ಮಾಡಿಸಿದರು. ಚಿಂತನಪಲ್ಲಿ ಪರಂಪರೆ ಮತ್ತು ಇತರ ಪರಂಪರೆಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಹೆಚ್ಚಾಯಿತು. ಹಾರ್ಮೋನಿಯಂ ಅನ್ನು ಬಹಳ ಹತ್ತಿರದಿಂದ ಗಮನಿಸುವ ಅವಕಾಶ ಸಿಕ್ಕಿತು ಹಾರ್ಮೋನಿಯಂ ಸಹಿತವಾಗಿ ಹಾಡಿದರೆ ಸ್ವರಗಳು ತಪ್ಪುವ ಸಾಧ್ಯತೆಯೇ ಇಲ್ಲ ಎನ್ನುವುದು ಅರಿವಾಯಿತು. ಕಲಿಯುವ ಕುತೂಹಲ ಹೆಚ್ಚಾಯಿತು.

**ನಿತ್ಯಸ್ಥಾನಂದರು ಮಾತನಾಡಿದ ವಿಷಯಗಳಲ್ಲಿ ನನ್ನ ಮನಸ್ಸಿನಲ್ಲಿ ಪರಿವರ್ತನೆ ತಂದ ಅಂಶಗಳು** -

- ಚಾರಿತ್ರ ಶುದ್ಧಿ, ಮನಶಕ್ತಿಯ ವೃದ್ಧಿ, ಬುದ್ಧಿವಂತಿಕೆಯ ವಿಕಾಸ ಮತ್ತು ಸ್ವಂತಕಾಲಿನ ಮೇಲೆ ನಿಲ್ಲುವುದು ಶಿಕ್ಷಣದ ಪ್ರಮುಖ ಮೌಲ್ಯಗಳು ಎಂದು ವಿವೇಕಾನಂದರು ತಿಳಿಸಿದ್ದಾರೆ.
- ಚಾರಿತ್ರ್ಯ ಹೋದರೆ ಹೋಯಿತಷ್ಟೇ ಹಣ ಬರುವುದು ಹೋಗುವುದು ನೈತಿಕತೆ ಇಲ್ಲದೆ ಯಾವ ಆಚರಣೆಯು ಒಳಿತು ಮಾಡುವುದಿಲ್ಲ ನಮ್ಮ ಮನಸ್ಸಿನಲ್ಲಿ ಬರುವ ಆಲೋಚನೆಗಳ ಬಗ್ಗೆ ನಾವು ಸದಾ ಎಚ್ಚರವಾಗಿರಬೇಕು. ಒಳ್ಳೆಯ ಆಲೋಚನೆಗಳನ್ನು ಅಭ್ಯಾಸ ಮಾಡಬೇಕು. ಒಬ್ಬ ವ್ಯಕ್ತಿಯ ಯಶಸ್ಸಿಗೆ ಭಾವನಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿ ಮೂರು ಬೇಕು. ಚಾರಿತ್ರ್ಯದಿಂದ ಇಚ್ಛಾಶಕ್ತಿಯನ್ನು ಬೆಳೆಸಿಕೊಳ್ಳಬೇಕು ಜ್ಞಾನದ ಬಗ್ಗೆ ಆಸ್ತಿ ಮತ್ತು ಪ್ರೀತಿ ಇರಬೇಕು ಮತ್ತೆ ಮತ್ತೆ ಉತ್ತಮ ಚಿಂತನೆಗಳು ಬರುವಂತೆ ಮನಸ್ಸಿಗೆ ಅಭ್ಯಾಸ ಮಾಡಬೇಕು.
- ಉದ್ದೇಶ ಮತ್ತು ಸಂಕಲ್ಪದೊಂದಿಗೆ ಓದಲು ಕೂಡಬೇಕು. ಹೀಗೆ ಮನಸ್ಸನ್ನು ತರಬೇತು ಗೊಳಿಸಬೇಕು. ಮೊದಲು ಆಸನ ಶುದ್ಧಿ, ಏಕಾಗ್ರತೆ, ಇಚ್ಛಾಶಕ್ತಿಯ ಸಾಧನೆ ಮಾಡಬೇಕು. ಇದಕ್ಕೆ ಭಂಗ ತರುವ ವಿಷಯಗಳಿಗೆ ಬರಬೇಡ ಎನ್ನುವ ನಿಖರ ಸೂಚನೆ ಕೊಡಬೇಕು.

**ಸ್ವಾಮಿ ವೀರೇಶಾನಂದರ ಉತ್ತಮ ನುಡಿಗಳು**

- ನಮ್ಮನ್ನು ನಾವು ಅಧ್ಯಾಪಕರು ಶಿಕ್ಷಕರು ಎಂದು ಏನೇ ಕರೆದುಕೊಂಡರು ಸಮಾಜ ನಮ್ಮನ್ನು ನೋಡುವುದು ಒಬ್ಬ ಗುರುವಾಗಿದೆ. ಮೌಲ್ಯಗಳ ಆಚರಣೆ ಇಲ್ಲದವ ಗುರುವಾಗಲಾರ.
- ಸಾಧಾರಣ ವ್ಯಕ್ತಿ ಗುರುವಾಗಲಾರ.
- ಶಾಸ್ತ್ರಗಳ ಮರ್ಮ ತಿಳಿಯುವುದು ಅಧ್ಯಯನ ಎನಿಸಿಕೊಳ್ಳುವುದು. ದೋಷರಹಿತ, ಸತ್ಯನಿಷ್ಠ, ಚಾರಿತ್ರ್ಯ ಶುದ್ದಿ ಗುರುವಿನ ಲಕ್ಷಣ. ಗುರು ಶಿಷ್ಯ ಸಂಬಂಧ ಆತ್ಮ ಮತ್ತೊಂದು ಆತ್ಮದೊಡಗಿನ ಸಂಬಂಧ ಎಂದು ಅರಿವಾಗುವುದು ಗುರುವಿನ ಲಕ್ಷಣ.
- ಈಗಿನ ಕಾಲದಲ್ಲಿ ಇಂತಹ ಸಂಬಂಧ ಸಾಧ್ಯವೇ? ಎಂಬ ಪ್ರಶ್ನೆ ಬರಬಹುದು. ಉತ್ತರ ಈಗಲೂ ಸಾಧ್ಯವಾಗಲೇಬೇಕು. ಇಲ್ಲದಿದ್ದರೆ ಈವೃತ್ತಿಯ ಮಹತ್ವವೇ ಇರುವುದಿಲ್ಲ.
- ವಿದ್ಯಾರ್ಥಿಗಳು ಅಧ್ಯಾಪಕನಲ್ಲಿ ಗಮನಿಸಿದ ಅಪಮೌಲ್ಯವನ್ನು ಬಾಯಿಬಿಟ್ಟು ಹೇಳುವುದಿಲ್ಲ. ಆದರೆ ಅವರ ದೃಷ್ಟಿಯಲ್ಲಿ ಅಧ್ಯಾಪಕನನ್ನು ಕೆಳಗೆ ಇಳಿಸಿರುತ್ತಾರೆ. ಅಧಿಕಾರ ವಶದಿಂದ ಹೆದರಬಹುದು ಅಂಕಗಳು ಬರಬಹುದು. ಆದರೆ ಚಾರಿತ್ರ್ಯ ಸೃಷ್ಟಿ ಮಾಡಲು ಸಾಧ್ಯವಾಗಲಿಲ್ಲ.
- ಪ್ರತಿಯೊಬ್ಬ ವ್ಯಕ್ತಿ ವಿದ್ಯಾರ್ಥಿಯಲ್ಲೂ ಯಾವುದಾದರೂ ಒಂದು ಸಾಧ್ಯತೆ,

ಸಾಮರ್ಥ್ಯ ಇದ್ದೇ ಇರುವುದು. ಅದನ್ನು ಗುರುತಿಸಿ ಬೆಳೆಸುವುದು ಅದರಿಂದ ಅವನಲ್ಲಿ ಆತ್ಮವಿಶ್ವಾಸ ತರಿಸುವುದು ಗುರುವಿನ ಕೆಲಸ.

- ಬೋಧನಾ ಕ್ರಮ - ಮೂರು ಹಂತಗಳಲ್ಲಿ ನಡೆಯಬೇಕು. **ಉಪದೇಶ** (ನೇರವಾಗಿ ಹೇಳಿಕೊಡುವುದು) **ಉಪಪತ್ತಿ** (ಚಿಂತನೆ ಮಾಡುವ ಆಲೋಚನೆ ಮಾಡುವ ವಿಧಾನ ಹೇಳಿಕೊಡುವುದು) **ಉಪಾಸನ** (ತನ್ಮಯತೆಯಿಂದ ಒಂದು ವಿಷಯದಲ್ಲಿ ಮುಳುಗುವುದು)
- ಹಂತದಿಂದ ಹಂತಕ್ಕೆ ಅಧ್ಯಾಪಕರ ಕೆಲಸ ಕಡಿಮೆಯಾಗಬೇಕು ವಿದ್ಯಾರ್ಥಿಯ ಕೆಲಸ ಹೆಚ್ಚಾಗಬೇಕು.
- ಪ್ರಕೃತಿ, ಕಾಡಿನ ವಾತಾವರಣ ಶಾಂತತೆಯನ್ನು ತಂದರು ಅಧ್ಯಾಪಕನ ಶಾಂತ ಮನಸ್ಥಿತಿಯೇ ವಾತಾವರಣವನ್ನು ಶಾಂತವಾಗಿ ಇರಿಸುವುದು.
- ವಿದ್ಯೆ ವಿನಯವನ್ನು ಕೊಡಬೇಕು. ಇದು ಕರ್ಮ ಯೋಗದಿಂದ, ಸೇವೆಯಿಂದ ಅಭ್ಯಾಸವಾಗಬೇಕು.
- ಗುರು speaking machine, ಶಿಷ್ಯ listening machine ಆಗಬಾರದು. ಬೀಜವು ಬೆಳೆಯಲು ಬೇಕಾದ ಮಣ್ಣು ಇರಬೇಕು, ನೀರು ಬೇಕು, ಬೆಳಕು ಬೇಕು. ಇವುಗಳನ್ನು ಮಾತ್ರ ಹೊರಗಿನಿಂದ ಕೊಡಲು ಸಾಧ್ಯ. ಬೆಳೆಯುವ ಕೆಲಸ ಬೀಜವೇ ಮಾಡಬೇಕು. ಹಾಗೆಯೇ ವಿದ್ಯಾರ್ಥಿಗೆ ಬೇಕಾದ ಹೊರಗಿನ ಸೌಕರ್ಯಗಳನ್ನು, ವಾತಾವರಣವನ್ನು ಕೊಡಬಹುದು. ಕಲಿಯುವ ಕೆಲಸವನ್ನು ವಿದ್ಯಾರ್ಥಿಯೇ ಮಾಡಬೇಕು.
- ವಿಷಯಗಳ ಬೋಧನೆಗಿಂತ ಚಾರಿತ್ರ್ಯ, ಏಕಾಗ್ರತೆ, ಆತ್ಮವಿಶ್ವಾಸ... ಇವೆ ಶಿಕ್ಷಣದ ಮುಖ್ಯ ಮೌಲ್ಯಗಳು ಇದರ ಕಡೆಗೆ ಅಧ್ಯಾಪಕನ ಗಮನ ಇರಬೇಕು.
- ವಿದ್ಯಾರ್ಥಿಯ ಗಮನ ಯಾವುದೋ ಒಂದರಲ್ಲಿ ಖಂಡಿತ ಇರುವುದು. ಅದನ್ನು ಬೇಕಾದ ಕಡೆಗೆ ಎಳೆಯುವುದು ಅಧ್ಯಾಪಕನ ಕರ್ತವ್ಯ.
- ಹೊರ ಜಗತ್ತಿನ ಆಕರ್ಷಣೆ ಇದ್ದೇ ಇರುವುದು. ಆಕರ್ಷಣೀಯ ಕೇಂದ್ರವಾಗಿ ನಾವು ಯಾವುದನ್ನು ನಿಲ್ಲಿಸುತ್ತೇವೆ ಎಂಬುದು ಮುಖ್ಯ.
- ಎಲ್ಲಾ ಬೋಧನೆಗಳು ಒಂದೇ ಕಾಲದಲ್ಲಿ ಅರ್ಥವಾಗುವುದಿಲ್ಲ. ಜೀವನದ  ಬೇರೆ ಬೇರೆ ಸಂದರ್ಭಗಳಲ್ಲಿ ಅನುಭವಕ್ಕೆ ಬರುವುದು. ಆದರೆ ಅಧ್ಯಾಪಕನು ಎಲ್ಲಾ ಸಮಯಗಳಲ್ಲೂ ಮೌಲ್ಯಗಳನ್ನು ಹೇಳುತ್ತಲೇ ಇರಬೇಕು. ನಡೆದು ತೋರಿಸಬೇಕು.

**ಡಾ. ಮುರಳಿಧರ ಅವರ ಕೆಲವು ಸ್ವಾರಸ್ಯಕರ ಅಂಶಗಳು**

- ಪ್ರತಿಯೊಬ್ಬರಿಗೂ ಅವರದೇ ಆದ ಕಲಿಯುವ ಭಾಷೆ ಒಂದು ಇರುವುದು ಅದು ಅವರ ಮನೋವೃತ್ತಿಗೆ ಸಂಬಂಧಿಸಿದ ಅಧ್ಯಾಪಕರು ಹೇಳಿದ್ದನ್ನು ವಿದ್ಯಾರ್ಥಿಗಳು ತಮ್ಮ ಕಲಿಕಾ ಭಾಷೆಯಲ್ಲಿ ಅನುವಾದ ಮಾಡಿಕೊಂಡು ಅರ್ಥ ಮಾಡಿಕೊಳ್ಳುವರು **ಅಧ್ಯಾಪಕರ ಸ್ವಾಧ್ಯಾಯ ಮಗುವಿನ ಸ್ವ ಆಗುವುದು ಮುಖ್ಯ.** ಇಲ್ಲದಿದ್ದರೆ ಅಂತರ ಇದ್ದೇ ಇರುವುದು.

# The Importance of Gurukula Education in Modern Times

**- Archana R S (Secondary Teacher)**

On August 31, 2024, we participated in a training workshop at Shri Ramakrishna Ashrama. The workshop focused on "The Importance of Gurukula Education in Modern Times and Student-Centered Approaches." The gathering was addressed by two profound speakers: Shri Nityasthananda Swami and Shri Veershananda Ji. Here are my experiences and learnings from that event:

Srimat Swami Nityasthananda Ji discussed the relevance of the Gurukula system in modern education, emphasizing the importance of building character and mental strength in children. He outlined four key pillars of education, as described by Swami Vivekananda:

1. Character building
2. Enhancing mental strength
3. Expanding consciousness
4. Being self-reliant

He noted that while expanding knowledge is important, character-building is the ultimate goal. He emphasized that while morality can exist without spirituality, true spirituality cannot thrive without moral values.

Swamiji also highlighted the significance of habits, using the word "habit" to illustrate that removing letters leaves 'T,' which stands for Truth. This underscores how deeply ingrained truth should be in our habits.

He stressed that knowledge is a powerful tool, and educators have a responsibility to spark interest and foster a love for learning in students. However, he pointed out that education today often lacks a lasting impact.

Finally, he encouraged educators to promote critical thinking, emotional intelligence, and an accommodating mindset in students, ensuring that the learning environment focuses on their needs and psychological development.

Shri Veershananda Ji shared a key message: A true guru teaches not only the basics (ಅಕ್ಷರ ವಿದ್ಯೆ) but also helps students understand themselves (ಆತ್ಮ ವಿದ್ಯೆ), guiding them toward moksha. In this journey, the role goes beyond just delivering lessons; it’s about helping students build focus, character, and confidence, especially during their brahmacharya phase when discipline and focus are crucial.

However, many teachers have shifted toward being mere instructors, prioritizing academic success over holistic education. This shift serves as a reminder that education is not just about delivering content; it is also about shaping minds, values, and spiritual growth. Recognizing this imbalance is part of the learning process and an opportunity to realign with the deeper purpose of education.

We also discussed necessary changes in child-centered education and how to implement them effectively. The aim was to bring fresh perspectives from the Gurukula system into our curriculum, creating a supportive environment for this approach.

We engaged in group discussions to identify the challenges we face and brainstorm strategies to address them, ensuring the focus remained on the needs of the students. Overall, the session reminded us at Purnapramati to have more confidence in our practices and to keep improving them.

I’m thankful to Purnapramati for the opportunity to participate in this session.

# ಉದ್ಭವ ಶಾಲೆಯನ್ನು ಅರಿಯುವ ನನ್ನ ಪಯಣ

- ಭವಾನಿ ಸಂಪಂಗಿ (ಪ್ರಶಿಕ್ಷಕರು)

- ಒಂದನೇ ತರಗತಿಯವರೆಗೆ ಮಕ್ಕಳಿಗೆ ಓದುವ ಹಾಗೂ ಬರೆಯುವ ಯಾವುದೇ ಚಟುವಟಿಕೆ ಇರುವುದಿಲ್ಲ.
- ಒಂದನೇ ತರಗತಿಯವರೆಗೂ ಅಂದರೆ ಫೌಂಡೇಶನ್ ಹಂತದಲ್ಲಿ ಕೇವಲ ರಂಗೋಲಿ ಹಾಕುವುದು, ಮಣ್ಣಿನಲ್ಲಿ ಆಡುವುದು, ಮರದ ಮೇಲೆ ಕಟ್ಟಿರುವ ಮನೆಗಳಿಗೆ ಏಣಿ / ಹಗ್ಗದ ಸಹಾಯದಿಂದ ಹತ್ತಿ - ಇಳಿಯುವುದು ಹಾಗೂ ಬಟ್ಟೆ ಹೊಲಿಯುವುದು ಮತ್ತು ನೇಯ್ಗೆ ಕೆಲಸಗಳು ಮಾತ್ರ ಮಕ್ಕಳಿಗೆ ಇರುತ್ತವೆ.
- ಒಂದನೇ ತರಗತಿಯಿಂದ ಮಕ್ಕಳು crayon ನಲ್ಲಿ ಬರೆಯಲು ಆರಂಭಿಸುತ್ತಾರೆ. ಎರಡನೇ ತರಗತಿಯಿಂದ ಬಣ್ಣದ ಪೆನ್ಸಿಲ್ ಹಾಗೂ ಮೂರನೇ ತರಗತಿಯಿಂದ ಸಾಮಾನ್ಯ ಪೆನ್ಸಿಲ್ನಿಂದ ಬರೆಯಲು ಆರಂಭಿಸುತ್ತಾರೆ.
- ಮಕ್ಕಳಿಗೆ ಗೆರೆಗಳಿಲ್ಲದ ಬಿಳಿ ಹಾಳೆಯ ಪುಸ್ತಕಗಳನ್ನು ಬರೆಯಲು ಕೊಡಲಾಗುತ್ತದೆ.
- ಚುಕ್ಕೆಯ ರಂಗೋಲಿಗಳನ್ನು ಮಕ್ಕಳಿಗೆ ಹೆಚ್ಚಾಗಿ ಅಭ್ಯಾಸ ಮಾಡಿಸಲಾಗುತ್ತದೆ. ಈ ಮೂಲಕ ಮಕ್ಕಳಿಗೆ ಗಣಿತದ ಹಾಗೂ ಸಂಖ್ಯೆಗಳನ್ನು ಎಣಿಸುವ ಪರಿಕಲ್ಪನೆಯನ್ನು ಮೂಡಿಸುತ್ತಾರೆ.
- Stainers ಎಂಬ ಪರಿಕಲ್ಪನೆಯಲ್ಲಿ ಆಯೋಜಿಸಲಾಗಿರುವಂತಹ ಚಟುವಟಿಕೆಗಳನ್ನೇ ಇಲ್ಲಿ ನಡೆಸುತ್ತಾರೆ.
- ಮಕ್ಕಳಿಗೆ ಕೆಲಸಗಳನ್ನು ತಿಳಿಸಿ ಗುಂಪುಗಳಲ್ಲಿ ಹಂಚಿಕೆ ಮಾಡಿ ಬಿಡಲಾಗುತ್ತದೆ. ನಂತರ ಮಕ್ಕಳು ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿರುತ್ತಾರೆ. ಅಧ್ಯಾಪಕರು ಅವರ ಜೊತೆಯಲ್ಲಿಯೇ ಇರುತ್ತಾರೆ. ಆದರೆ ಅವರೂ ಸಹ ತಮ್ಮ ಅಧ್ಯಯನ ಅಥವಾ ಇತರ ಕೆಲಸಗಳನ್ನು ಮಾಡಿಕೊಳ್ಳುತ್ತಿರುತ್ತಾರೆ.
- ಈ ಶಾಲೆಯಲ್ಲಿ ಯಾವುದೇ ರೀತಿಯ ಸಹಾಯಕ ಸಿಬ್ಬಂದಿ ಇಲ್ಲ.
- ಈ ಶಾಲೆಯಲ್ಲಿ ಯಾವುದೇ ರೀತಿಯ ಪಠ್ಯಕ್ರಮವನ್ನು ಅಥವಾ ಪಠ್ಯಪುಸ್ತಕವನ್ನು ಬೋಧನೆಗೆ ಆಧಾರವಾಗಿಟ್ಟುಕೊಂಡಿಲ್ಲ. ವಿದ್ಯಾರ್ಥಿಗಳು ಬರೆಯುವ ಪುಸ್ತಕವನ್ನು ವರ್ಷಕ್ಕೆ ಎರಡು ಬಾರಿ ಪೋಷಕರ ಅವಗಾಹನೆಗಾಗಿ ಮನೆಗೆ ಕಳುಹಿಸಲಾಗುತ್ತದೆ.
- ವಿದ್ಯಾರ್ಥಿಗಳ ಮನೆಗೆ ಹೋಗಿ ಪೋಷಕರ ಸಭೆಯನ್ನು ನಡೆಸಲಾಗುತ್ತದೆ.
- ಪೋಷಕರ ಸಭೆಯ ಅರ್ಧ ಸಮಯವನ್ನು ವಿದ್ಯಾರ್ಥಿಯ ವರದಿಗಾಗಿ ಹಾಗೂ ಉಳಿದ ಅರ್ಧ ಸಮಯವನ್ನು ಪೋಷಕರ ಹಾಗೂ ಶಿಕ್ಷಕರ ಸುಖ-ದುಃಖ ಹಂಚಿಕೆಗಾಗಿ ಬಳಸಿಕೊಳ್ಳಲಾಗುತ್ತದೆ.
- ಯಾವ ಅಧ್ಯಾಪಕರ ಮುಖದಲ್ಲೂ ಗೊಂದಲ ಅಥವಾ ಯಾವುದೇ ರೀತಿಯ ಪ್ರಶ್ನೆ, ಆತಂಕ ಕಂಡುಬರಲಿಲ್ಲ. ಎಲ್ಲ ಅಧ್ಯಾಪಕರು

ಸಮಾಧಾನದಿಂದ ಕಾರ್ಯವನ್ನು ನಿರ್ವಹಿಸುತ್ತಿದ್ದರು.

- ಆಧಾರ ( Foundation ) ಮಕ್ಕಳಿಗೆ ಕೇವಲ ಆಟಗಳನ್ನು ಹಾಗೂ ಕೌಶಲ್ಯಗಳನ್ನು ಕಲಿಸಿದ್ದರೂ ಕೂಡ ಅವರು ಚೆನ್ನಾಗಿ ಆಂಗ್ಲ ಭಾಷೆಯಲ್ಲಿ ಮಾತನಾಡಲು ಕಲಿತಿದ್ದರು.
- ಶಾಲೆಯ ಪಠ್ಯಕ್ರಮಗಳಿಗೆ ಸಂಬಂಧಿಸಿದಂತೆ ಇಲ್ಲಿ ಪೋಷಕರ ಯಾವುದೇ ರೀತಿಯ ಒತ್ತಡ ಅಥವಾ ಪ್ರಶ್ನೆಗಳು ಕಂಡುಬರುವುದಿಲ್ಲ.
- ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ಮೊದಲೇ ಒಂದನೇ ತರಗತಿಯವರೆಗೂ ಯಾವುದೇ ರೀತಿಯ ಓದುವ ಹಾಗೂ ಬರೆಯುವ ಚಟುವಟಿಕೆ ನಾವು ಹೇಳಿಕೊಡುವುದಿಲ್ಲವೆಂಬುದನ್ನು ಖಚಿತವಾಗಿ ಪೋಷಕರಿಗೆ ತಿಳಿಸಿ ಅವರ ಒಪ್ಪಿಗೆಯನ್ನು ಪಡೆಯಲಾಗುತ್ತದೆ.
- ಕೇವಲ ಮಕ್ಕಳು ಹತ್ತನೇ ತರಗತಿಗೆ ಬಂದಾಗ ಮಾತ್ರ ಅವರ ವಾರ್ಷಿಕ ಪರೀಕ್ಷೆಯ ಪಠ್ಯಕ್ರಮವನ್ನು ಬೋಧಿಸಲಾಗುತ್ತದೆ. ಅಲ್ಲಿಯವರೆಗೂ ಶಿಕ್ಷಕರು ಎಲ್ಲಾ ವಿಷಯಗಳ ಕೌಶಲ್ಯಗಳನ್ನು ತಾವು ಇಚ್ಛೆಪಟ್ಟ ಯಾವುದೇ ರೀತಿಯ ವಿಧಾನದಲ್ಲಿ ಯಾವುದೇ ಘಟಕ ಅಥವಾ ವಿಷಯವನ್ನು ಆಯ್ಕೆ ಮಾಡಿಕೊಂಡು ಬೋಧಿಸಬಹುದಾಗಿದೆ.
- ಕಡಿಮೆ ಸಂಖ್ಯೆಯ ಮಕ್ಕಳು ಇರುವುದರಿಂದ ಹೆಚ್ಚಿನ ಗುಣಮಟ್ಟದ ಕಲಿಕೆ ಕಂಡುಬರುತ್ತಿದೆ.
- Teacher driven and learner driven ಎರಡು ರೀತಿಯ ಕಲಿಕೆಯ ವಾತಾವರಣಗಳು ಕಂಡು ಬಂದವು.
- ವಾರದಲ್ಲಿ ಎಂಟು ಗಂಟೆಗಳನ್ನು ಕಲಿಕೆಯ ಅವಧಿಯನ್ನಾಗಿ ನಿಯೋಜಿಸಲಾಗಿದೆ. ಉಳಿದ ಸಮಯದಲ್ಲಿ ಮಕ್ಕಳು ಆಟಗಳ ಮೂಲಕ ಅಥವಾ ಹಲವು ರೀತಿಯ ಕಲೆಗಳ ಮೂಲಕ ಕಲಿಕೆಯನ್ನು ಮಾಡಿಕೊಳ್ಳುತ್ತಾರೆ.
- ಮೂರನೇ ತರಗತಿವರೆಗಿನ ಮಕ್ಕಳಿಗೆ ಶನಿವಾರದಂದು ತರಗತಿಗಳು ನಡೆಯುವುದಿಲ್ಲ.

# पूर्णप्रमति साप्ताहिक अध्ययन माला: विमर्शन

- **Anagha Rao (Purnapramati's Alumni Student)**

***Continuation of Previous episode….***

As prefaced by Rohit anna in the previous monthly issue of July, - one of the works that Pawan Guptaji, Brajendra Pandeyji and Indumathi taayi insisted that we study in Purnapramati was Daishik Shastra. 'Daishik Shastra' was written by Badri Sah Tuldhariyaji based on the teachings of his guru - Somvari Baba, in the 1920s, a turning point in many ways in our country's history. As it was recommended by these scholarly and accomplished people, we started reading this book on the auspicious day of Bheeshmashtami under the guidance of Dhananjayacharya and Srinidhi anna.

When I wanted to invite my friends to these study sessions, I would refer to Daishik Shastra as Bharateeya perspective in understanding political science. (The author derives the meaning of the word Daishik Shastra according to Samskrutha grammar as that shastra which protects the desha.) Generally when we study political science in college, the first chapter usually is about the definition of political science. What does political science seek to understand? Some writers prefer to explain political science to be the study limited to the study of the State and its organs. Some are of the opinion that it is about the study of government. Others say that it is the study of man and his political behaviour.

However, I was pleasantly surprised when the first chapter in Daishik Shatra was about neither State or any kind of political organisation by man. It also wasn't about the history or the account of many illustrious kings this land had been blessed with. So, how does the author introduce us to the 'shastra which seeks to protect and nurture our desha'?

The first chapter begins by raising a lot of burning questions. The author asks "Why is Europe, which sought to spread peace, a major cause of unrest across the world? The same Europe which popularly preached "*And unto him that smiteth thee on the one cheek offer also"* (If anyone hits you on the cheek, offer the other also.), why is it today raining down bullets on defenceless people? Why is England which considered Germany to be its brother in arms, fighting a war with Germany allying itself with Russia which was once its enemy? Why are the French, who dethroned their king through a bloody revolution but are left submitting to the rule of Napoleon? The same Bharat which preached "Hato va prapsyasi swargam, jitva va bhokshase mahim" why is it relying on methods like Satyagraha? Why did Duryodhana, who refused to give Pandavas even a needle point's worth of land, give the entire Angadesha to Karna?"

What is the common underlying cause which is able to explain these contradictory events occurring in vastly different time periods and vastly different societies? The author delineates the common cause of all these events as 'Sukha'.

The first chapter deals with Sukha. - the most fundamental cause of all human action, the most basic desire which is common in all living beings. Analysing sukha is the starting point of the book which seeks to understand 'daishik shastra.' Something that is a fundamental characteristic of the human psyche, often overlooked by most political philosophies as something very subjective and therefore out of their scope in their 'objective' study. However, to speak of behaviour of man or about controlling the behaviour of man without speaking of the root cause of all human action seems to be an incomplete study as well as something that is ineffectual.

Therefore, the author in order to begin his book, starts laying a solid foundation by analysing the nature of sukha and apt ways to obtain them. Here, the author divides Sukha into two categories. '*Pashav*' and '*Manav*' - Pashav sukha is the kind of sukha common to all animals - food, sleep, and reproduction. Manav sukha is derived from having achieved their goal even if it might be painful in the process. So the factor that sets humans apart from animals is having a goal or aim in life.

One of the recurrent themes across the book is classifying the concept or subject into sub-parts based on the qualitative values it holds as Satvik, Rajasa, and Tamasa. We see most of the subjects divided into categories of Satvika, Rajasa, and Tamasa, which is considered the very nature of prakruthi in our shastras. (Being able to understand diverse concepts and their implications or effects by knowing whether it is of satvik nature, rajaasa nature or tamasa nature has helped me immensely and brings joy every time when things around me start making sense.)

- Sukha that which invigorates the buddhi is Satvik,
- Sukha that invigorates the senses - *indriyas* is rajasa
- Sukha that arises out of *moha* and *pramada* is tamasa. - based on lies & falsity and probably through dependence and addiction.

This classification of sukha is found in Bhagavadgita in the 18th chapter:

सुखं त्विदानीं त्रिविधं श्रृणु मे भरतर्षभ ।
अभ्यासाद्रमते यत्र दुःखान्तं च निगच्छति ।।
यत्तदग्रे विषमिव परिणामेऽमृतोपमम् ।
तत्सुखं सात्त्विकं प्रोक्तमात्मबुद्धिप्रसादजम् ।।

विषयेन्द्रियसंयोगाद्यत्तदग्रेऽमृतोपमम् ।
परिणामे विषमिव तत्सुखं राजसं स्मृतम् ।
यदग्रे चानुबन्धे च सुखं मोहनमात्मनः ।
निद्रालस्यप्रमादोत्थं तत्तामसमुदाहृतम् ।।

Having explained the kinds of sukha experienced by Humans, the author continues by the explaining the four main factors which are essential for humans to obtain sukha:

1. Susadhya Ajeevika
2. Shanti
3. Swatantrya
4. Paurusha

Susadhya aajevika refers to being able to earn one's livelihood without much struggle. To better understand these factors, the author explains the opposing factors, which are detrimental to obtaining sukha:

1. Kashta-sadhya ajeevika
2. Chinta
3. Paratantrya
4. Klaibya

When a man struggles to earn his livelihood, all his efforts and energy are diverted towards it, he is consumed by worries, he is dependent on others and this leads him to a state of inertia and indifference where lives only from hand to mouth and can't engage in other meaningful activities.

However, when a man is able to earn his livelihood without struggling and in an uncomplicated manner, he is worry-free, at peace with himself, he is able to stand on his own legs without being dependent on others and is a motivated and capable person who can achieve his goals.

The author argues that for an individual to attain these factors, it is necessary that the society facilitates it. A man is after all a social being. It is necessary that these factors are present and widely spread into society, otherwise, even if a man manages to procure these factors, it will only be a temporary situation.

Therefore for a man to be happy, the society should be in a state to enable these four factors:

1. Susadhya Ajeevika
2. Shanti
3. Swatantrya
4. Paurusha

And here is where the author concludes the first chapter of Daishik Shastra, and the method to go about ensuring it is dealt with in the next chapter.

॥ श्रीकृष्णार्पणमस्तु ॥

# HOW GOOD ARE YOU AT CODING?

1.

| | | |
|---|---|---|
| 2 | 9 | 16 |
| 3 | 10 | 27 |
| 4 | 11 | ? |

a. 40
b. 44
c. 48
d. None of the above

2. If 123 = 14, 234 = 29, 345= 50, 111=?
a. 1
b. 2
c. 3
d. In sufficient informaiton to find the value

3. If in a certain code BIG is written as DRN, then what is JACK in the same code?
a. TBFV
b. LJJR
c. WNPY
d. None of the above

4. If in a certain code PENCIL is written as GEECIC, how is PEN written as
a. CRA
b. GEE
c. CIL
d. PEN only

# FIND THE TRUE ONES

5. Which of the following statements is true with respect to GOOGOL?
   a. A googol has 100 zeros
   b. A googol has 1000 zeros
   c. A googol has 10000 zeros
   d. A googol has 100000 zeros

6. Which of the following statements is true with respect to 1 tonne?
   a. 1 tonne = 10kg
   b. 1 tonne = 100kg
   c. 1 tonne = 1000kg
   d. 1 tonne = 10000kg

7. Which of the following statements is correct?
   a. Sum of any two adjacent angles always measure $180^0$
   b. Sum of any two adjacent angles always measure $90^0$
   c. Both (a) and (b) are correct
   d. All the above are incorrect.

8. Which of the following statements is correct?
   a. To convert Kg to grams, we should multiply by 100
   b. To convert meters to decimeter multiply it by 10
   c. To convert milli meters to centimeters multiply by 0.01
   d. All the above are correct

9. Which of the following statements is mathematically correct?
   a. I am 2.5 years old
   b. Time duration is 2.5 hours
   c. Height is 2.5 feet
   d. None of the above

10. Find the correct pair
    a. 9, 11
    b. 15, 19
    c. 17, 19
    d. 33, 35

# ಪೂರ್ಣಪ್ರಮತಿ ಘೋಷಣೆ



दशप्रमतिं जनयन्त योषणः
पूर्णप्रमतिः
परिपूर्णशिक्षणकेन्द्रम्
गिरिनगरम्, कल्याणनगरम्
प्रातिष्ठापकसंरक्षकाः
श्री श्री विश्वेशतीर्थश्रीपादाः
ಪೂರ್ಣಪ್ರಮತಿ
ಪರಿಪೂರ್ಣ ಕಲಿಕಾತಾಣಕ್ಕೆ ಸ್ವಾಗತ
(ಆಧುನಿಕ ಮತ್ತು ಸಾಂಪ್ರದಾಯಿಕ ವಿದ್ಯೆಗಳನ್ನು ಒಳಗೊಂಡ
ಗುರುಕುಲ ಪದ್ಧತಿಯ ಮುಕ್ತ ಕಲಿಕಾ ವಾತಾವರಣ)
ಶಿಕ್ಷಣದ ಮೂಲಕ ಶಾಸ್ತ್ರ, ಜೀವನ ಕಲೆಗಳು, ಆಹಾರ, ಆರೋಗ್ಯ,
ವಸ್ತ್ರ, ಕೃಷಿ, ಹೀಗೆ ಅನೇಕ ಕ್ಷೇತ್ರಗಳಲ್ಲಿ ಭಾರತೀಯತೆಯ ಅಳವಡಿಕೆ ಮತ್ತು
ತನ್ಮೂಲಕ ರಾಷ್ಟ್ರಸಂರಕ್ಷಣೆಗೆ ತೊಡಗುವ ದೀಕ್ಷೆ ಇದೆಯೇ ?
ಪೂರ್ಣಪ್ರಮತಿ ಪ್ರಶಿಕ್ಷಣವರ್ಗದಲ್ಲಿ ಭಾಗವಹಿಸಿ
ವಿದ್ಯಾರ್ಥಿಗಳಾಗಿ, ಪೋಷಕರಾಗಿ, ಶಿಕ್ಷಕರಾಗಿ, ಪ್ರಶಿಕ್ಷಕರಾಗಿ,
ವ್ಯವಸ್ಥಾಪಕರಾಗಿ, ನಿರ್ವಾಹಕರಾಗಿ, ಸಂಯೋಜಕರಾಗಿ
ಭಾರತದಾದ್ಯಂತ ಮನೆ-ಮನೆಯನ್ನು, ಊರು-ಊರುಗಳನ್ನು,
ಪ್ರಾಂತ್ಯ-ಪ್ರಾಂತ್ಯಗಳನ್ನು, ಕ್ಷೇತ್ರ-ಕ್ಷೇತ್ರಗಳನ್ನು ತಲುಪೋಣ.
ಪರಿಚಯ ಸಂವಾದ: ಪ್ರತಿ ಶನಿವಾರ ಬೆಳಗ್ಗೆ 10:00 ರಿಂದ 11:00
ಪ್ರಶಿಕ್ಷಣವರ್ಗ: ಪ್ರತಿ ತಿಂಗಳು
ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ,
ಆಸಕ್ತರಿಗೂ ವಿಷಯ ತಿಳಿಸಿ. ಕರೆಮಾಡಿ ನಿಮ್ಮ ಹೆಸರನ್ನು
ನೋಂದಾಯಿಸಿಕೊಳ್ಳಿ.
ಸಂಪರ್ಕ ಸಂಖ್ಯೆ - 9663474669, 9141416390
ವಿಳಾಸ - ಪೂರ್ಣಪ್ರಮತಿ, 26/1, 1ನೇ ಅಡ್ಡರಸ್ತೆ, ಹೊಸಕೆರೆಹಳ್ಳಿ ಮುಖ್ಯರಸ್ತೆ,
ಗಿರಿನಗರ, ಬೆಂಗಳೂರು - 560085

दशप्रमतिं जनयन्त योषणः

pūrṇapramati

A Centre for Integrated Learning

# ಪೂರ್ಣಪ್ರಮತಿ

ಪರಿಪೂರ್ಣ ಕಲಿಕಾತಾಣ

ಪರಂಪರಾ ಬೀಜರಕ್ಷಾ ಧ್ಯೇಯ ಮತ್ತು ಸ್ವಧರ್ಮದ
ಸಾಕ್ಷಾತ್ಕಾರಕ್ಕಾಗಿ ವಿದ್ಯಾಸತ್ರಯಾಗದ ದಾರಿಯಲ್ಲಿ

ಪ್ರತಿಷ್ಠಾಪಕ ಸಂರಕ್ಷಕರು :
ಪರಮ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರು,
ಪೇಜಾವರ ಅಧೋಕ್ಷಜ ಮಠ

## ಪೂರ್ಣಪ್ರಮತಿ ಶಿಕ್ಷಕ ತರಬೇತಿಯನ್ನು ಆಯೋಜಿಸಿದೆ

# ಶಿಕ್ಷಣಮ್-ಪರೀಕ್ಷಣಮ್

ನಿಮ್ಮೊಳಗಿನ ವಿದ್ಯಾರ್ಥಿಯನ್ನು ಜಾಗೃತಗೊಳಿಸಿರಿ ಹಾಗೂ
ಅಧ್ಯಾಪಕರಾಗುವ ನಿಮ್ಮ ಕನಸನ್ನು ಸಾಕಾರಗೊಳಿಸಿಕೊಳ್ಳಿ

ಇದೊಂದು ಅಲ್ಪಾವಧಿ ತರಬೇತಿ ಆಗಿದ್ದು ಅನುಭವಾತ್ಮಕ ಕಲಿಕೆಯ ಸ್ವರೂಪದಲ್ಲಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ 2020 ಮತ್ತು ಭಾರತೀಯ ಸಾಂಪ್ರದಾಯಿಕ ಗುರುಕುಲ ಪದ್ಧತಿಯ ಚಿಂತನೆಯ ಅಡಿಯಲ್ಲಿ ಈ ತರಬೇತಿಯನ್ನು ರೂಪಿಸಲಾಗಿದೆ.

**ತರಬೇತಿ ಪಡೆದುಕೊಂಡವರು**

- ತಮ್ಮಲ್ಲಿರುವ ಒಬ್ಬ ಒಳ್ಳೆಯ ವಿದ್ಯಾರ್ಥಿಯನ್ನು ಪರಿಶೋಧಿಸಿಕೊಳ್ಳುವಿರಿ
- ಹೊಸದನ್ನು ಕಲಿಯಲು ಮುಕ್ತಮನಸ್ಸನ್ನು ಹೊಂದುವಿರಿ
- ಆಧುನಿಕ ಸಮಕಾಲೀನ ವಿದ್ಯೆಗಳು ಮತ್ತು ಸಾಂಪ್ರದಾಯಿಕ ಭಾರತೀಯ ವಿದ್ಯೆಗಳ ಮಧ್ಯೆ ಸಾಮರಸ್ಯವನ್ನು ಅರಿಯಬಲ್ಲವರಾಗುವಿರಿ
- ಅನುಭವಾತ್ಮಕ ಕಲಿಕಾ ವಿಧಾನಗಳ ಮೂಲಕ ಕಲಿಸಲು ಸಮರ್ಥರಾಗುವಿರಿ
- ನಿಮ್ಮ ಕಲಿಕೆಯು ಅನುಭವಿ ಮಾರ್ಗದರ್ಶಕರಿಂದ ಪ್ರಮಾಣೀಕರಿಸಲ್ಪಡುತ್ತದೆ

**ಪ್ರಾರಂಭ :**
21 ಅಕ್ಟೋಬರ್ 2024

**ಸಮಯ :**
**ಬೆಳಿಗ್ಗೆ 8-20 ರಿಂದ ಸಂಜೆ 4-30**

**ಸ್ಥಳ :** ಪೂರ್ಣಪ್ರಮತಿ, ನಂ. 26/1, 14ನೇ ಅಡ್ಡರಸ್ತೆ,
ಹೊಸಕೆರೆಹಳ್ಳಿ ಮುಖ್ಯರಸ್ತೆ, ಗಿರಿನಗರ, ಬೆಂಗಳೂರು – 560085

96634 74669 / 72590 40610

info@purnapramati.in www.purnapramati.in www.anandavana.purnapramati.in